ಕರ್ನಾಟಕ ಸರ್ಕಾರ – ಅರಣ್ಯ ಇಲಾಖೆ

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಹಾಗೂ ಆಯ್ಕೆ ಪ್ರಾಧಿಕಾರ ಇವರ ಕಛೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-560003**

# ಪ್ರಕಟಣೆ

**ಅಧಿಸೂಚನೆ ಸಂಖ್ಯೆ: ಬಿ9-ನೇಮಕಾತಿ-ವಿವ-2/2015-16 ದಿನಾಂಕ: 15.08.2015**

## 19 ಉಪ ವಲಯ ಅರಣ್ಯಾಧಿಕಾರಿ (ಹೈದರಾಬಾದ್ – ಕರ್ನಾಟಕ) ಹುದ್ದೆಗಳಿಗೆ ನೇರ ನೇಮಕಾತಿ

ಕರ್ನಾಟಕ ಅರಣ್ಯ ಇಲಾಖೆಯಲ್ಲಿ ಹೈದರಾಬಾದ್ – ಕರ್ನಾಟಕ ಪ್ರದೇಶದ ವ್ಯಾಪ್ತಿಗೆ ಒಳಪಡುವ 19 ಉಪ ವಲಯ ಅರಣ್ಯಾಧಿಕಾರಿ ಹುದ್ದೆಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ ದಿನಾಂಕ: 20.03.2016 ರಂದು ನಡೆದ ಲಿಖಿತ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಪಡೆದ ಅಂಕಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ 07.05.2016 ರಂದು ಪ್ರಕಟಿಸಲಾಗಿತ್ತು.

ಬಿ.ಎಸ್ಸಿ. (ವಿಜ್ಞಾನ) ಪದವೀಧರರಿಗೆ ಸಂಬಂಧಿಸಿದ ಹುದ್ದೆಗಳ ನೇರ ನೇಮಕಾತಿಯ ಪ್ರಶ್ನೆ ಪತ್ರಿಕೆಯು 140 ಪ್ರಶ್ನೆಗಳನ್ನು ಒಳಗೊಂಡಿದ್ದು, ಭಾಗ – ಎ ರಲ್ಲಿರುವ 60 ಪ್ರಶ್ನೆಗಳು ಕಡ್ಡಾಯವಾಗಿರುತ್ತದೆ. ಭಾಗ – ಎ ನ್ನು ಹೊರತುಪಡಿಸಿ, ಅಭ್ಯರ್ಥಿಯು ಭಾಗ – ಬಿ ಅಥವಾ ಭಾಗ – ಸಿ ಇವುಗಳಲ್ಲಿ ಯಾವುದಾದರೂ ಒಂದು ಭಾಗದ ಪ್ರಶ್ನೆಗಳನ್ನು ಆಯ್ಕೆಮಾಡಿಕೊಳ್ಳಬೇಕು. ಒಂದು ವೇಳೆ ಅಭ್ಯರ್ಥಿಯು ಭಾಗ – ಬಿ ಅಥವಾ ಭಾಗ – ಸಿ ಯಲ್ಲಿರುವ ಪ್ರಶ್ನೆಗಳನ್ನು ಭಾಗಶಃ ಅಥವಾ ಸಂಪೂರ್ಣವಾಗಿ ಉತ್ತರಿಸಿದಲ್ಲಿ, ಭಾಗ – ಬಿ ಅಥವಾ ಭಾಗ – ಸಿ ಯಲ್ಲಿನ ಪ್ರಶ್ನೆಗಳಲ್ಲಿ ಯಾವ ಭಾಗದ ಪ್ರಶ್ನೆಗಳಿಗೆ ಹೆಚ್ಚು ಅಂಕಗಳು ಬಂದಿರುತ್ತದೆಯೋ ಆ ಅಂಕಗಳನ್ನು ಮೆರಿಟ್‌ಗೆ ಪರಿಗಣಿಸಬೇಕಾಗಿರುತ್ತದೆ. ಆದರೆ, ದಿನಾಂಕ: 07.05.2016 ರಂದು ಪ್ರಕಟಿಸಿರುವ ಅಂಕಗಳಲ್ಲಿ ಬಿ.ಎಸ್ಸಿ. (ವಿಜ್ಞಾನ) ಪದವೀಧರರಿಗೆ ಸಂಬಂಧಿಸಿದ ಹುದ್ದೆಗಳಲ್ಲಿ ಅಭ್ಯರ್ಥಿಯು ಭಾಗ – ಎ ಹಾಗೂ ಭಾಗ – ಬಿ ಮತ್ತು ಭಾಗ – ಸಿ ಯಲ್ಲಿ ಪಡೆದ ಎಲ್ಲಾ ಅಂಕಗಳನ್ನು (140 ಪ್ರಶ್ನೆಗಳಿಗೆ ಪಡೆದ ಅಂಕಗಳನ್ನು) ಪ್ರಕಟಿಸಲಾಗಿರುತ್ತದೆ. ಈ ಅಂಕಗಳ ಮೆರಿಟ್ ಆಧಾರದ ಮೇಲೆ ಬಿ.ಎಸ್ಸಿ. (ವಿಜ್ಞಾನ) ಪದವೀಧರರಿಗೆ ಸಂಬಂಧಿಸಿದ 9 ಹುದ್ದೆಗಳಿಗೆ ತಾತ್ಕಾಲಿಕವಾಗಿ ಆಯ್ಕೆ ಹೊಂದಿರುವ ಅಭ್ಯರ್ಥಿಗಳ ಪಟ್ಟಿಯನ್ನು ಹಾಗೂ ಕಾಯುವಿಕೆ ಪಟ್ಟಿಯನ್ನು ದಿನಾಂಕ: 08.11.2016 ರಲ್ಲಿ ಪ್ರಕಟಿಸಲಾಗಿತ್ತು.

ಪ್ರಸ್ತುತ ಬಿ.ಎಸ್ಸಿ. (ವಿಜ್ಞಾನ) ಪದವೀಧರರು ಪ್ರಶ್ನೆ ಪತ್ರಿಕೆಯ ಭಾಗ – ಎ ರಲ್ಲಿ ಪಡೆದಿರುವ ಅಂಕಗಳನ್ನು ಹಾಗೂ ಭಾಗ – ಬಿ ಅಥವಾ ಭಾಗ – ಸಿ ರ ಪ್ರಶ್ನೆಗಳಲ್ಲಿ ಯಾವ ಭಾಗದ ಪ್ರಶ್ನೆಗಳಿಗೆ ಹೆಚ್ಚು ಅಂಕಗಳನ್ನು ಪಡೆದಿರುತ್ತಾರೋ ಆ ಅಂಕಗಳನ್ನು ಪ್ರಕಟಿಸಲಾಗಿದೆ. ಇದರನ್ವಯ ಪರಿಷ್ಕೃತ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸಹ ಸಿದ್ದಪಡಿಸಿ ಪ್ರಕಟಿಸಲಾಗಿದೆ.

ಬಿ.ಎಸ್ಸಿ. (ಅರಣ್ಯಶಾಸ್ತ್ರ) ಪದವೀಧರ ಹುದ್ದೆಗಳಿಗೆ ದಿನಾಂಕ: 08.11.2016 ರಂದು ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿದ್ದು, ಇದರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಬಿ.ಎಸ್ಸಿ. (ಅರಣ್ಯಶಾಸ್ತ್ರ) ಪದವೀಧರರ ಹುದ್ದೆಗಳಿಗೆ ತಾತ್ಕಾಲಿಕವಾಗಿ ಆಯ್ಕೆಯಾಗಿರುವ ಅಭ್ಯರ್ಥಿಗಳು ಹಾಗೂ ಪ್ರಸ್ತುತ ಬಿ.ಎಸ್ಸಿ. (ವಿಜ್ಞಾನ) ಪದವೀಧರರ ಹುದ್ದೆಗಳಿಗೆ ತಾತ್ಕಾಲಿಕವಾಗಿ ಆಯ್ಕೆಯಾಗಿರುವ ಅಭ್ಯರ್ಥಿಗಳು ಹಾಗೂ ಕಾಯುವಿಕೆ ಪಟ್ಟಿಯಲ್ಲಿರುವ (ದಿನಾಂಕ: 18.01.2016 ರಂದು ಪ್ರಕಟಿಸಿರುವ ಪಟ್ಟಿಯ ಅಭ್ಯರ್ಥಿಗಳು) ಅಭ್ಯರ್ಥಿಗಳು **ದಿನಾಂಕ: 06.02.2017 ರಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕಲಬುರ್ಗಿ ವೃತ್ತ, ಕಲಬುರ್ಗಿ** ಇವರ ಸಮ್ಮುಖ ಹಾಜರಾಗಲು ತಿಳಿಸಿದೆ. ಈ ಎಲ್ಲಾ ಅಭ್ಯರ್ಥಿಗಳಿಗೆ ವೈದ್ಯಕೀಯ ಪರೀಕ್ಷೆಯನ್ನು ನಡೆಸಿ, ದಾಖಲೆಗಳ ಪರಿಶೀಲನೆ ನಡೆಸಿ, ನೇಮಕಾತಿ ಆದೇಶ ನೀಡಲಾಗುವುದು.

ಈಗಾಗಲೇ ಮೂಲ ದಾಖಲೆಗಳನ್ನು ಇಲಾಖಾ ವಶ ಸಲ್ಲಿಸಿರುವ ಅಭ್ಯರ್ಥಿಗಳು ದಾಖಲೆಗಳನ್ನು ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ. ಮೂಲ ದಾಖಲೆಗಳನ್ನು ಸಲ್ಲಿಸಲು ಬಾಕಿ ಇರುವ ಅಭ್ಯರ್ಥಿಗಳು ಸದರಿ ದಿನಾಂಕದಂದು ದಾಖಲೆಗಳನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕಲಬುರ್ಗಿ ವೃತ್ತ, ಕಲಬುರ್ಗಿ ಇವರ ಸಮ್ಮುಖ ಹಾಜರಾಗಿ ಸಲ್ಲಿಸುವುದು.

ಬೆಂಗಳೂರು
ದಿನಾಂಕ: 18.01.2017

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ)